831(1317) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್. (ಚಾಮರಾಜ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರಿನ ಮೆಟ್ರೋಪೋಲ್ ವೃತ್ತದಿಂದ ಹಿನ್‌ಕಲ್‌ವರೆಗಿನ ಜೋಡಿ ರಸ್ತೆ ನಿರ್ಮಿಸಲು ತಗಲುವ ಅಂದಾಜು ವೆಚ್ಚ ಎಷ್ಟು;

ಆ) ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದು ಯಾವ ಹಂತದಲ್ಲಿದೆ? (ವಿವರವಾಗಿ ತಿಳಿಸುವುದು)

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಮೈಸೂರಿನ ಮೆಟ್ರೋಪೋಲ್ ವೃತ್ತದಿಂದ ಹಿನ್‌ಕಲ್‌ವರೆಗಿನ ಜೋಡಿ ರಸ್ತೆ ನಿರ್ಮಿಸಲು ತಗಲುವ ಅಂದಾಜು ವೆಚ್ಚ ರೂ.10 ಕೋಟಿಗಳು.

ಆ) ಈ ಭಾಗವು ಮೈಸೂರು–ಬಂಟವಾಳ ರಸ್ತೆಯ ಪ್ಯಾಕೇಜ್ 'A' ನ ಭಾಗವಾಗಿದೆ.

ಪ್ಯಾಕೇಜ್ 'A' ಮೈಸೂರಿನಿಂದ–ಕುಶಾಲನಗರದವರೆಗೆ 86.66 ಕಿಮೀ.

ರೂ. 84 ಕೋಟಿ ರೂಪಾಯಿಗಳ (ಎಂಬತ್ತನಾಲ್ಕು ಕೋಟಿ ರೂಪಾಯಿಗಳು ಮಾತ್ರ) ಅಂದಾಜಿನ ಮೈಸೂರಿನಿಂದ–ಕುಶಾಲನಗರವರೆಗಿನ ಪ್ಯಾಕೇಜ್‌ನ ಕಾಮಗಾರಿಗಳನ್ನು ತೆಗೆದುಕೊಳ್ಳಲು ದಿನಾಂಕ 24–1–2005 ರಂದು ಟೆಂಡರ್ ಕರೆಯಲಾಗಿದೆ.

832(1318): ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್. (ಚಾಮರಾಜ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರಿನಿಂದ ಹೊಂಗಳ್ಳಿ ಜಲಶುದ್ಧೀಕರಣಗಾರದವರೆಗೆ ಯೋಜಿಸಲಾಗಿರುವ ಫೀಡರ್ ಮೇನ್ ವಿದ್ಯುತ್ ವ್ಯವಸ್ಥೆ ಯಾವ ಹಂತದಲ್ಲಿದೆ;

ಆ) ಈ ಯೋಜನೆಯ ಅಂದಾಜು ವೆಚ್ಚ ಎಷ್ಟು;

ಇ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಮೈಸೂರಿನ ಹೊಂಗಳ್ಳಿ ಜಲ ಶುದ್ಧೀಕರಣ ಮತ್ತು ಪಂಪಿಂಗ್ ಘಟಕಕ್ಕೆ ಹಾಲಿ ಇರುವ ವಿದ್ಯುತ್ ಸರಬರಾಜು ಮಾರ್ಗಕ್ಕೆ ಹೆಚ್ಚುವರಿಯಾಗಿ, ಅಡಚಣೆರಹಿತ ವಿದ್ಯುತ್ ಸರಬರಾಜು ಪಡೆಯಲು ಮೈಸೂರು ನಗರಪಾಲಿಕೆಯವರು ಇನ್ನೊಂದು ಫೀಡರ್ ಲೈನ್ ಪಡೆಯಲು ಉದ್ದೇಶಿಸಿರುತ್ತಾರೆ. ಈ ವಿಷಯವು ಮೈಸೂರು ಮಹಾನಗರ ಪಾಲಿಕೆಯ ಪರಿಶೀಲನೆಯಲ್ಲಿದೆ. ಈ ಕೆಲಸವನ್ನು ಸ್ವಂತ ಕಾಮಗಾರಿ ನಿರ್ವಹಣಾ ರೀತಿಯಲ್ಲಿ ಮೈಸೂರು ಮಹಾನಗರ ಪಾಲಿಕೆಯವರು ತಾವೇ ಸ್ವಯಂ ನಿರ್ವಹಿಸಬೇಕಾಗಿರುತ್ತದೆ. ಈ ಸಂಬಂಧ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಇದುವರೆಗೂ ಯಾವುದೇ ಅರ್ಜಿ ಬಂದಿರುವುದಿಲ್ಲ.

ಆ) ಈ ಯೋಜನೆಯ ಅಂದಾಜು ವೆಚ್ಚ ಸುಮಾರು 36 ಲಕ್ಷ ರೂ. ಗಳು. ಮೈಸೂರು ಮಹಾನಗರ ಪಾಲಿಕೆಯು ಅರ್ಜಿ ಸಲ್ಲಿಸಿದ ನಂತರ ವಿವರವಾದ ಅಂದಾಜು ಪಟ್ಟಿ ತಯಾರಿಸಲು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಸಾಧ್ಯವಾಗುತ್ತದೆ.